system and they can give a goby to this trade as per the provisions of the ensuing law.

MR. SPEAKER.—Sri H. Viswanath can call his notice but he is not here at this moment.

MATTERS UNDER RULE 312

Re : Purchase of hybrid Jower and ragi by Government under support scheme.

†ಶ್ರೀ ಎಸ್.ಆರ್. ಬೊಮ್ಮಾಯಿ(ಹುಬ್ಬಳ್ಳಿ).— ಸ್ವಾಮಿ, ಬಳ್ಳಾರಿ ಜಿಲ್ಲೆಯಲ್ಲಿ ಜೋಳ ಮತ್ತು ರಾಗಿಯನ್ನು ಸಪೋರ್ಟ್ ಪ್ರೈಸ್ ಪ್ರಕಾರ ಖರೀದಿಗೆ ತೆಗೆದು ಕೊಂಡಿದ್ದೀರಿ. ಮೊದಲೇ ಅದರ ಬೆಲೆ ಬಿದ್ದು ಹೋಗಿದೆ. ಸಾಕಷ್ಟು ಸರ್ಕಾರದಿಂದ ಇದು ಖರೀದಿ ಆಗುತ್ತಾ ಇಲ್ಲ ಎನ್ನುವ ಒಂದು ಕಂಪ್ಲೈಂಟ್ ಇದೆ. ಆದಾಗ್ಯೂ ಕೂಡ ಹರಪನಹಳ್ಳಿ ತಾಲ್ಲೂಕ್‌ನಲ್ಲಿ ಮತ್ತು ಇನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ರಾಗಿಯನ್ನು ಈಗ ೨-೩ ತಿಂಗಳಿಂದ ತೆಗೆದುಕೊಂಡಿದ್ದೀರಿ. ಆದರೆ ಅವರಿಗೆ ಕೊಡಬೇಕಾದ ಹಣವನ್ನು ಇನ್ನೂ ಕೊಟ್ಟಿಲ್ಲಾ. ರೈತ ಸಂಘದವರು ತಮಗೆ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಆಫೀಸಿಗೆ ಹೋಗಿ ಈ ಬಗ್ಗೆ ಮನವಿಗಳನ್ನು ಸಲ್ಲಿಸಿದರು. ಆ ಮನವಿಗಳಿಗೆ ಇನ್ನೂ ಉತ್ತರ ಬಂದಿಲ್ಲಾ. ಕೊನೆಗೆ ಅವರು ತೀರ್ಮಾನ ಮಾಡಿ ಈ ಬಗ್ಗೆ ೩೦ನೇ ಏಪ್ರಿಲ್ ೧೯೭೯ ರಂದು ಒಂದು ನೋಟೀಸ್ ಅನ್ನೂ ಸಹ ಕೊಟ್ಟಿದ್ದಾರೆ. ಏನಂತ ಅಂದರೆ ಮೇ ೧೫ನೇ ತಾರೀಖಿನೊಳಗೆ ನಮಗೆ ಹಣ ಕೊಡುವ ಒಂದು ವ್ಯವಸ್ಥೆ ಮಾಡದೇ ಹೋದರೆ ತಾಸೀಲ್ದಾರರ ಮುಂದೆ ಉಪವಾಸ ಮಾಡುತ್ತೇವೆ. ಆದರಂತೆ ಅವರು ಈಗ ಅಲ್ಲಿ ಉಪವಾಸ ಕೂತಿದ್ದಾರೆ. ರೈತರ ಕಷ್ಟ ಎಲ್ಲರಿಗೂ ಗೊತ್ತುಂಟು. ಮೊದಲೇ ಅದರ ಬೆಲೆ ಬಿದ್ದು ಹೋಗಿದೆ, ಅವರು ಕಷ್ಟದಲ್ಲಿದ್ದಾರೆ ಎನ್ನುವುದು ಎಲ್ಲರೂ ತಿಳಿದುಕೊಂಡಿದ್ದಾರೆ. ಆದುದರಿಂದ ನಾನು ಈ ಬಗ್ಗೆ ಹೇಳುವುದೇನೆಂದರೆ ಇನ್ನು ಒಂದು ವಾರದಲ್ಲೋ ಅಥವಾ ಎರಡು ವಾರದಲ್ಲೋ ಅವರಿಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಆವರಿಗೆ ಎರಡು ತಿಂಗಳಾದರೂ ಹಣವನ್ನು ಕೊಡದೇ ಹೋದರೆ ಅವರು ಏನು ಮಾಡಬೇಕು ; ಹೇಳಿ. ಅವರು ಇಲ್ಲಿಯವರೆಗೂ ನೋಡಿದರೂ ಕೂಡ ಏನೂ ವ್ಯವಸ್ಥೆ ಮಾಡಿಲ್ಲಾ. ಆದುದರಿಂದ ಅವರು ಈಗ ಅಲ್ಲಿ ಉಪವಾಸ ಕೂತಿದ್ದಾರೆ. ತಾವು ಕೂಡಲೇ ಈ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

೧೧-೩೦ ಎ.ಎಂ.

† ಶ್ರೀ ಜೆ.ಎಚ್. ಪಟೇಲ್ (ಚನ್ನಗಿರಿ).—ಅಧ್ಯಕ್ಷರೇ, ತಾವು ಅನುಮತಿ ಕೊಟ್ಟರೆ, ನನ ಜಿಲ್ಲೆಯಲ್ಲಿ ಇದರ ಬಗ್ಗೆ ಚಳುವಳಿ ನಡೆದಿದೆ. ಅದಕ್ಕೊಸ್ಕರ ಎರಡು ಮಾತುಗಳನ್ನು ಹೇಳುತ್ತೇನೆ. ರಾಗಿಯನ್ನು ಕೊಳ್ಳುವ ವಿಷಯದಲ್ಲಿ, ಮಾನ್ಯ ಬೊಮ್ಮಾಯಿಯವರು ಹೇಳಿದ ಪ್ರಕಾರ ರಾಗಿಯನ್ನು ರೈತರಿಂದ ಸರ್ಕಾರದವರು ಪೂರ್ತಿಯಾಗಿಕೊಂಡಿಲ್ಲ. ಕೊಂಡಿರತಕ್ಕ ರಾಗಿಗೆ ಹಣವನ್ನು ಕೊಟ್ಟಿಲ್ಲ, ಕೊಂಡಿರತಕ್ಕ ರಾಗಿಯನ್ನು ಹಳ್ಳಿಗಳಲ್ಲಿಯೇ ಬಿಟ್ಟು ಮಳೆ ಗಾಳಿಗೆ ಎಕ್ಸ್‌ಪೋಸ್ ಮಾಡಿಟ್ಟಿದ್ದಾರೆ. ಗೋಡೌನ್‌ಗಳಿಗೆ ತೆಗೆದುಕೊಂಡು ಹೋಗಿಲ್ಲ, ಕಡಿಮೆ ಧಾರಣೆಗೆ ರಾಗಿಯನ್ನು ಕೊಂಡು ಕೊಂಡು ಸಪೋರ್ಟಿಂಗ್ ಪ್ರೈಸ್‌ಗೆ ಮಾರಾಟಮಾಡತಕ್ಕ ವರ್ತಕರೊಂದಿಗೆ ಅಧಿಕಾರಿಗಳು ಹೊಂದಿಕೊಂಡಿದ್ದಾರೆ. ಇಷ್ಟು ಅಕ್ರಮಗಳು ನಡೆಯುತ್ತಿವೆ. ನನ್ನ ತಾಲ್ಲೂಕಿನಲ್ಲಿ ನಾನು ಅಧಿಕಾರಿಗಳನ್ನು ಕರೆದು ಏಕೆ ರೈತರಿಗೆ ಹಣ ಕೊಟ್ಟಿಲ್ಲ ವೆಂದು ಕೇಳಿದರೆ, ಅವರು ನಾವು ರೈತರಿಂದ ಕೊಂಡ ರಾಗಿಯು ಗೋಡೌನು ತಲುಪಿಸಿದ ಮೇಲೆ ಹಣ ಕೊಡಬೇಕು ಎಂದು ಹೇಳಿದರು. ನಮ್ಮದು ಸ್ವಲ್ಪ ಭತ್ತ ಬೆಳೆಯುವ ಪ್ರದೇಶ ಈಗ ಭತ್ತವನ್ನು ಗೋಡೌನ್ ಸ್ಟಾಕ್ ಮಾಡಿದ್ದಾರೆ. ಅಲ್ಲಿ ರಾಗಿಯನ್ನು ಇಡುವುದಕ್ಕೆ ಜಾಗ ಇಲ್ಲ. ಸರ್ಕಾರದವರು ಹಳ್ಳಿಗಳಲ್ಲಿ ಯಾವುದಾದರೂ ಒಂದು ಮನೆಯನ್ನು ತೆಗೆದುಕೊಂಡು ಈ ರಾಗಿಯನ್ನು ಇಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಸರ್ಕಾರದವರು ತಮ್ಮಖರ್ಚಿನಲ್ಲಾದರೂ ಮಾಡಲಿ, ಅಥವಾ ರೈತರ ಖರ್ಚಿನಲ್ಲಿಯಾದರೂ ಮಾಡಲಿ ಇದಾವುದನ್ನು ಮಾಡದೆ, ರೈತರಿಗೆ ಅಧಿಕಾರಿಗಳು ತೊಂದರೆ ಮಾಡುತ್ತಿದ್ದಾರೆ ಇವತ್ತಿನದಿವಸ ರೈತರು ಕಣ್ಣೀರು ಹಾಕುವ ಸ್ಥಿತಿ ಬಂದಿದೆ. ಸೊಸೈಟಿಯವರು ರಾಗಿ

ಕೊಟ್ಟವರಿಗೂ ಹಣ ಕೊಟ್ಟಿಲ್ಲ ; ಇದಕ್ಕೆ ವಿರುದ್ಧವಾಗಿ ಸೊಸೈಟಿಗೆ ರೈತರು ಕೊಡುವ ಬಾಕಿಗೆ ಅವರು ಆಸ್ತಿಪಾಸ್ತಿಗಳನ್ನು ಹರಾಜು ಮಾಡತಕ್ಕ ಕೆಲಸ ನಡೆದಿದೆ. ಇದೆಂಥ ವಿಪರ್ಯಾಸ ? ಇಷ್ಟೊಂದು ಅಕ್ರಮ ನಡೆಯುತ್ತಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ೨-೩ ಹಳ್ಳಿಗಳಲ್ಲಿ ಇಂಥ ಅವ್ಯವಹಾರ ನಡೆದಿದೆ. ದಯವಿಟ್ಟು ಇದರ ಬಗ್ಗೆ ಸೂಕ್ತ ರಿಲೀಫ್ ಕೊಡುತ್ತೀರಾ ?

† ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಹರಪನಹಳ್ಳಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಂಘವು ಕರ್ನಾಟಕ ಆಹಾರ ಮತ್ತು ನಾಗರೀಕ ಸಾಮಾನು ಸರಬರಾಜು ನಿಯಮಿತ ಕಂಪನಿಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದೆ. ಇದು ವರೆಗೂ ಸಂಘವು ೨೬.೬೭೭.೫೨ ಕ್ವಿಂಟಾಲ್ ರಾಗಿಯನ್ನು ಸಂಗ್ರಹಿಸಿದೆ. ಕಾರ್ಪೊರೇಷನ್‌ನವರು ೨೯ನೇ ಎಪ್ರಿಲ್ ೧೯೭೮ರ ತನಕ ಸಂಘದ ಬಿಲ್ಲುಗಳನ್ನು ರೂ. ೧೯,೦೦ ಟಿ೫೦-೦೦ ಮೌಲ್ಯದಷ್ಟು ಪಾವತಿ ಮಾಡಿದೆ. ೩೦ನೇ ಎಪ್ರಿಲ್ ೧೯೭೯ ರಲ್ಲಿ ಸಂಘವು ಪುನ : ೩.೮೯೭-ಳಿಳ ಕ್ವಿಂಟಾಲ್ ರಾಗಿಯ ಬಗ್ಗೆ ಅಂದರೆ, ೩,೫೪ ಟಿ೬೭-೦೦ ರೂಪಾಯಿಗಳ ಮೌಲ್ಯದಷ್ಟು ಬಿಲ್ಲುಗಳನ್ನು ಕೊಟ್ಟಿದೆ. ಈ ಮೊತ್ತದಲ್ಲಿ ಸರ್ವೀಸ್‌ಜಾರ್ಜನ್ನು ಸೇರಿಲ್ಲ, ಈ ಬಿಲ್ಲುಗಳು ಡಿಸ್ಟ್ರಿಕ್ಟ್ ಮ್ಯಾನೇಜರ್ ಪರಿಶೀಲನೆಯಲ್ಲಿವೆ ಮತ್ತು ಮಾಮೂಲಿನಂತೆ ಒಂದು ವಾರದೊಳಗೆ ಪಾವತಿ ಮಾಡಲಾಗುತ್ತಿದೆ. ಮಿಶ್ರತಳಿ ಜೋಳ ಎಫ್.ಎ.ಕ್ಯೂ. ಮಟ್ಟಕ್ಕಿಂತ ಕಡಿಮೆ ಇರುವುದರಿಂದ, ಮಿಶ್ರತಳಿ ಜೋಳವನ್ನು ಕೊಳ್ಳಲಾಗಲಿಲ್ಲ. ಮಿಶ್ರ ತಳಿ ಜೋಳವನ್ನು ಕರ್ನಾಟಕ ರಾಜ್ಯದಲ್ಲಿ ಕೊಳ್ಳುವುದಿಲ್ಲ. ಕರ್ನಾಟಕ ಫುಡ್ ಕಾರ್ಪೊರೇಷನ್ ಮೂಲಕ ಎಫ್. ಸಿ.ಐ. ನವರು ಕೊಳ್ಳುತ್ತಾರೆ. ಆದರೆ ಅದು ಅವರು ಕೇಳಿರತಕ್ಕ ಸ್ಪ್ಯಾಂಡರ್ಡ್ ಇದ್ದರೆ ಮಾತ್ರ. ಆದ್ದರಿಂದ ನಾವು ಯಾವುದನ್ನು ಕೊಳ್ಳಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹರಪನಹಳ್ಳಿ ವ್ಯವಸಾಯೋತ್ಪನ್ನ ಮಾರಾಟ ಸಂಘವು ಏಜಂಟ್ ಆಗಿ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ. ನಿಮ್ಮ ಪ್ರತಿನಿಧಿ ಯಾರೇ ಇರಲಿ, ಅವರು ಕರ್ನಾಟಕ ಫುಡ್ ಕಾರ್ಪೊರೇಷನ್ ಮೂಲಕ ಖರೀದಿ ಮಾಡುತ್ತಿದ್ದಾರೆ. ಇದು ಮುಖ್ಯವಲ್ಲ, ರೈತರಿಂದ ಕೊಂಡ ಮಾಲಿಗೆ ಇವರು ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದು ಮುಖ್ಯ. ತಮ್ಮ ಹೇಳಿಕೆಯಿಂದಲೇ ಸೊಸೈಟಿಯವರು ರೈತರಿಗೆ ಪೂರ್ತಿಯಾಗಿ ಹಣ ಕೊಟ್ಟಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ರೈತನಿಗೆ ಹಣ ಪಾವತಿಯಾಗುವುದು ಮುಖ್ಯ. ಇದರ ಬಗ್ಗೆ ಸರ್ಕಾರ ನಿಗಾವಹಿಸಬೇಕು. ಅದಕ್ಕೋಸ್ಕರ ಅಲ್ಲಿ ರೈತರು ಚಳುವಳಿ ಮಾಡುತ್ತಿದ್ದಾರೆ. ಆದ್ದರಿಂದ ತಾವು ಎಲ್ಲಾ ರೈತರಿಗೆ ಒಂದು ವಾರದಲ್ಲಿ ಹಣ ಕೊಡಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಆಗಲೇ ಹೇಳಿದ್ದೇನೆ. ಇದರಲ್ಲಿ ನಮ್ಮದು ಒಂದು ಜವಾಬ್ದಾರಿ ಇದೆ. ನನಗೆ ಬಂದಿರುವ ವರದಿಯ ಪ್ರಕಾರ ವರ್ತಕರು ಬಡ ರೈತರಿಂದ ಮಾಲನ್ನು ಕೊಂಡುಕೊಂಡು ಸ್ಮಾಲ್ ಫಾರ್ಮರ್ಸ್ ಸರ್ಟಿಫಿಕೇಟ್ಸ್ ಪಡೆದುಕೊಂಡು ಅವರ ಮೂಲಕ ಸರ್ಕಾರಕ್ಕೆ ಮಾರುತ್ತಾರೆನ್ನುವ ವದಂತಿ ಇದ್ದುದರಿಂದ ನಾನು ನಿಮ್ಮ ಡಿಸ್ಟ್ರಿಕ್ಟ್ ಮ್ಯಾನೇಜರ್ ಅವರಿಗೆ ವಿಚಾರ ಮಾಡಿಸಿ ಎಂದು ಆರ್ಡರ್ ಕಳುಹಿಸಿದ್ದೇನೆ. ಅವರು ಎರಡು ದಿವಸ ರಜ ಹಾಕಿದ್ದರಿಂದ ತಡವಾಗಿದೆ. ಬಿಲ್ಸ್ ಕೊಡತಕ್ಕ ಕಾರ್ಯಕ್ರಮವನ್ನು ಇನ್ನೊಂದು ವಾರದೊಳಗೆ ಪೂರೈಸುತ್ತೇವೆ. ರೈತರು ಅಲ್ಲಿ ಯಾವುದಕ್ಕೋಸ್ಕರ ಚಳುವಳಿ ಕೂತಿದ್ದಾರೋ ಅದು ನನಗೆ ಗೊತ್ತಿಲ್ಲ ಗೊತ್ತಿಲ್ಲದ್ದನ್ನು ಕೇಳುವುದು ಮಹಾ ಪಾಪ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎಂದು ಹೇಳುತ್ತಾರೆ. ಆದಷ್ಟು ಬೇಗ ಇದನ್ನು ಸೆಟಲ್ ಮಾಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ವರ್ತಕರು ತಾವು ಹೇಳುವ ರೀತಿಯಲ್ಲಿ ಮೋಸ ಮಾಡಿದ್ದರೆ ಅದನ್ನು ವಿಚಾರ ಮಾಡಿ, ತಪ್ಪು ಮಾಡಿದ್ದರೆ ತಕ್ಕ ಶಿಕ್ಷೆ ಕೊಡಿ ನನ್ನ ಆಭ್ಯಂತರವೇನೂ ಇಲ್ಲ. ರೈತರ ಸಂಘದ ಪ್ರತಿನಿಧಿಗಳು ಬಂದು ನನ್ನನ್ನು ಭೇಟಿಯಾಗಿ ಹೋಗಿದ್ದಾರೆ ಅವರಿಗೆ ಎರಡುತಿಂಗಳಿಂದ ಹಣವನ್ನು ಕೊಟ್ಟಿಲ್ಲ. ತಾವು ಇದನ್ನು ವಿಚಾರಿಸಿ ಕೂಡಲೆ ಅವರಿಗೆ ಹಣ ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ನಾನು ಮಾಡುತ್ತೇನೆಂದು ಆಗಲೇ ಹೇಳಿದ್ದೇನೆ. ಇನ್ನೊಂದು ವಾರ ಒಳಗೆ ಅದನ್ನು ಇತ್ಯರ್ಥ ಮಾಡುತ್ತೇನೆ. ಮಾನ್ಯ ಪಟೇಲರು ಹೇಳಿದ ವಿಚಾರ ನನ್ನಮುಂದೆ ಇಲ್ಲ.

ವರ್ತಕರು ಸಣ್ಣ ರೈತರಿಂದ ಕಡಿಮೆ ಬೆಲೆಗೆ ಕೊಂಡು ನಂತರ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವುದು ಚಿಂತಾಜನಕವಾದ ವಿಷಯ. ನಾನೂ ಆದನ್ನು ಒಪ್ಪುತ್ತೇನೆ. ಇದು ಆಗದ ಹಾಗೆ ನೋಡಿಕೊಳ್ಳಬೇಕಾದ್ದು ನಮ್ಮ ಜವಾಬ್ದಾರಿ ಇದೆ. ಆದಷ್ಟು ಪರಿಶ್ರಮ ವಹಿಸಿ ಇದನ್ನು ನಿಲ್ಲಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಮೈಕೇಲ್. ಬಿ. ಫರ್ನಾಂಡೀಸ್.—ಇಂಡಿಯನ್ ಇನ್ಸ್‌ಟಿಟ್ಯೂಟ್ ಬಗ್ಗೆ ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದನ್ನು ಆ ಮೇಲೆ ನೋಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಅಲ್ಲಿ ೨೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಗಂಭೀರ ಪರಿಸ್ಥಿತಿ ಇದೆ. ನಾಳೆ ಏಕೆ ಈ ವಿಷಯವನ್ನು ತೆಗೆದುಕೊಳ್ಳಬಾರದು ?

ಅಧ್ಯಕ್ಷರು.—ನನ್ನನ್ನು ಭೇಟಿ ಮಾಡಿ ಮಾನ್ಯ ಸದಸ್ಯರು ಇದನ್ನು ತಿಳಿಯಬಹುದು.

Budget Estimate for 1979-80 Demands for Grants
Demand Nos. 22 and 26 *Debate Continued*

† ಶ್ರೀ ಆರ್. ಗುಂಡೂರಾವ್ (ಸಾರಿಗೆ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಾರಿಗೆ, ಪ್ರವಾಸೋದ್ಯಮ ಮತ್ತು ಮೋಟಾರ್ ವೆಹಿಕಲ್ಸ್ ಇಲಾಖೆಗಳ ಮೇಲೆ ಕಳೆದ ಎರಡು ದಿವಸಗಳಿಂದ ಸುಮಾರು ೨೫ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹೆಚ್ಚು ಕಡಿಮೆ ಎಲ್ಲ ಮಾನ್ಯ ಸದಸ್ಯರು ಕೆಲವೇ ವಿಷಯ ಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಮತ್ತು ಎಲ್ಲರ ಅಭಿಪ್ರಾಯವೂ ಸಹ ಒಂದೇ ರೀತಿಯಿಂದ ಇದೆ. ಇದರಲ್ಲಿ ಕೆಲವರು ಹತ್ತು ಸಲ ತೊಂದರೆ ಅನುಭವಿಸಿರಬಹುದು, ಮತ್ತೆ ಕೆಲವರು ೫ ಸಲ ತೊಂದರೆ ಅನುಭವಿ ಸಿರಬಹುದು. ಅಂತೂ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಲಕ್ಷ್ಮೀಸಾಗರ್ ಅವರಿಂದ ಹಿಡಿದು ಕೊನೆಗೆ ಮಾತನಾಡಿದ ಶ್ರೀ ಪಂಪಾಪತಿ ವರೆಗೆ ಮಾತನಾಡಿದಂಥ ಎಲ್ಲ ಸದಸ್ಯರ ಸಲಹೆಗಳೂ ಒಂದೇ ಆಗಿತ್ತು. ಸಲಹೆಗಳನ್ನು ಮಾನ್ಯ ಸದಸ್ಯರು ನಾನಾ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹಣದ ಕೊರತೆ ಇದೆ, ಬಸ್‌ಗಳ ಸಂಖ್ಯೆ ಎಷ್ಟು ಕಡಿಮೆ ಇದೆ ಮತ್ತು ಖಾಸಗಿಯವರಿಂದ ಬಸ್‌ಗಳನ್ನು ಪಶಪಡಿಸಿಕೊಂಡ ಮೇಲೆ ಆ ಬಸ್‌ಗಳ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನೆಲ್ಲಾ ಹೇಳಿದ್ದಾರೆ. ಆ ಮೇಲೆ ರಾಷ್ಟ್ರೀಕರಣದ ನೀತಿಯ ಬಗ್ಗೆ ಸರ್ಕಾರದ ನಿಲುವು ಯಾವ ರೀತಿ ಇರಬೇಕೆಂಬ ಬಗ್ಗೆ ಸಹ ಅವರು ವಿಸ್ತಾರವಾಗಿ ಹೇಳಿದ್ದಾರೆ. ಅವರು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಅಲ್ಲದೆ, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ವೀರಪ್ಪಮೊಯಿಲಿ ಅವರು ಮಾತನಾಡುವಾಗ ಅನೇಕ ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಿದರು.

(ಶ್ರೀ ವೀರಪ್ಪಮೊಯಿಲಿ ಅವರು ಪೀಠವನ್ನು ಅಲಂಕರಿಸಿದರು)

ಈಗ ಅವರೇ ಅಧ್ಯಕ್ಷ ಪೀಠಕ್ಕೆ ಬಂದಿದ್ದಾರೆ ಸಮಾಜವಾದದ ನೀತಿಯನ್ನು ಸರ್ಕಾರ ಹೊಂದಿರುವಾಗ ಈ ಬಸ್‌ಗಳ ರಾಷ್ಟ್ರೀಕರಣವನ್ನು ಕೈಬಿಡುವಂತಹ ಮಾತುಗಳನ್ನಾಡುವುದು ಸರಿಯಲ್ಲವೆಂದು ಹೇಳಿದರು. ಈ ಮೋಟಾರ್ ವೆಹಿಕಲ್ಸಿಗೆ ಸಂಬಂಧಪಟ್ಟಂತೆ ಕೆಲವು ರೂಲ್ಸ್‌ಗಳನ್ನು ಮಾಡಿಲ್ಲವೆಂದು ಹೇಳಿದರು. ಅದೇ ರೀತಿಯಾಗಿ ಶ್ರೀಮಾನ್ ಆರ್ಮುಗಂ ಅವರು ಮೇನೇಜ್‌ಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ ಮತ್ತು ಮೇನೇಜ್‌ಮೆಂಟಿನಲ್ಲಿ ಖಾಸಗೀ ಸದಸ್ಯರಿಲ್ಲ, ಎಲ್ಲ ಅಧಿಕಾರಿಗಳೇ ಇದ್ದಾರೆಂದು ಹೇಳಿದರು. He said that there are no non-officials; only officials are there. He also suggested to include non-officials. Therefore, he pleaded for more number of SC/ST representation in the employment, promotion and also in other places. That was his contention. He has also touched some administrative problems and said that there are two Chief Engi-